ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2022-23/3448 ದಿನಾಂಕ: 01.10.2022

ಕರಡು ಅಧಿಸೂಚನೆ

ವಿಷಯ: ಬಿ.ಇಡಿ ಕಾಲೇಜುಗಳ ಅಧ್ಯಾಪಕರುಗಳ ಕರಡು ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿದ್ದು, ಸದರಿ ಪಟ್ಟಿಗೆ ಆಕ್ಷೇಪಣೆಯನ್ನು ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ:
1. ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ವಿ.ವಿ.ಪ/ಸಿಂ.ವಿ:2022-23/2563, ದಿ:22.07.2022
2. ಈ ಕಚೇರಿ ಅಧಿಸೂಚನೆ ಸಂಖ್ಯೆ:ತುವಿ:ವಿ.ವಿ.ಪ/ಸಿಂ.ವಿ:2022-23/2987, ದಿ:01.09.2022
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30.09.2022

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 21(1) ರ ಅನುಸಾರ ಶಿಕ್ಷಣ ನಿಕಾಯದ ಡೀನರನ್ನು ನಾಮನಿರ್ದೇಶನ ಮಾಡುವ ಸಂಬಂಧ ಬಿ.ಇ.ಡಿ. ಕಾಲೇಜುಗಳ ಅಧ್ಯಾಪಕರುಗಳ ವಿವರಗಳನ್ನು ಸಲ್ಲಿಸುವಂತೆ ಉಲ್ಲೇಖ (01)ರ ಪತ್ರದಲ್ಲಿ ಸೂಚಿಸಲಾಗಿತ್ತು. ಈ ಸಂಬಂಧ ಕಾಲೇಜುಗಳಿಂದ ಸ್ವೀಕೃತವಾದ ಮಾಹಿತಿಗೆ ಅನುಗುಣವಾಗಿ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲು ಉಲ್ಲೇಖ (02)ರ ಪತ್ರದಲ್ಲಿ ಸಮಿತಿಯನ್ನು ಅಧಿಸೂಚಿಸಲಾಗಿತ್ತು.

ಸದರಿ ಸಮಿತಿಯು ಸಭೆಯನ್ನು ನಡೆಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 21(1)ರನ್ವಯ ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿ ಯು.ಜಿ.ಸಿ. ಮತ್ತು ರಾಜ್ಯ ವೇತನ ಶ್ರೇಣಿ ಹೊಂದಿರುವಂತಹ ಅಧ್ಯಾಪಕರುಗಳ (ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರುಗಳ) ಕರಡು ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತದೆ.

ಸದರಿ ಕರಡು **ಜ್ಯೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣ www.tumkuruniversity.ac.in** ನಲ್ಲಿ **ಪ್ರಕಟಿಸಲಾಗಿರುತ್ತದೆ.** ಸದರಿ ಜೇಷ್ಠತಾ ಪಟ್ಟಿಯ ಬಗ್ಗೆ ಆಕ್ಷೇಪಣೆಗಳಲ್ಲಿದ್ದಲ್ಲಿ ದಿನಾಂಕ:12.10.2022ರ ಅಪರಾಹ್ನ 4:00 ಗಂಟೆಯವರೆಗೆ ಲಿಖಿತ ರೂಪದಲ್ಲಿ ಮುದ್ದಾಂ (By Hand) ಉಪಕುಲಸಚಿವರು, ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ವಿಭಾಗ ಅಥವಾ ವಿಭಾಗದ ಸಿಬ್ಬಂದಿಯವರಿಗೆ ಸಲ್ಲಿಸಲು ಸೂಚಿಸಿದೆ. ನಂತರ ಬಂದಂತಹ ಅಕ್ಷೇಪಣೆಗಳ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

01.10.22

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ಸಂಯೋಜಿತ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಈ ಮಾಹಿತಿಯನ್ನು ತಮ್ಮ ಕಾಲೇಜಿನ ಎಲ್ಲಾ ಅಧ್ಯಾಪಕರ ಗಮನಕ್ಕೆ ತರುವುದು.

ಪ್ರತಿಗಳು:
1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.- (ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಣಾದಲ್ಲಿ ಪ್ರಕಟಿಸುವುದು)
3. ಕಚೇರಿ ಪ್ರತಿ.

172.16.3.142\cde VIJAY CDC\circular (DRAFT SENIORITY LIST).docx